ಸೋದರಿ ನಿವೇದಿತಾ ಭಾಗ ೫

ಕಥೆ: ದೇವಪ್ರಸಾದ ಭಟ್ಟಾಚಾರ್ಯ ಅನುವಾದ: ಉಷಾ ಎಸ್. ಮೂರ್ತಿ ಚಿತ್ರ: ಸುನಿತಾ ವಾಸು

ಸ್ವಾಮೀಜಿ ನದಿಯಲ್ಲಿ ಸ್ನಾನ ಮಾಡಿದರು. ಗುಹೆಯನ್ನು ಪ್ರವೇಶಿಸಿ ಭವ್ಯ ಹಿಮಲಿಂಗದ ಮುಂದೆ ಸಾಷ್ಟಾಂಗ ಪ್ರಣಾಮಗೈದರು.

ಸ್ವಲ್ಪ ಸಮಯದ ನಂತರ ಅವರು ಹೊರಗೆ ಬಂದರು.

ನಾನೆಷ್ಟು ಆನಂದಪಟ್ಟೆ ! ಹಿಮಲಿಂಗವು ಸಾಕ್ಷಾತ್ ಶಿವನೆಂದು ಭಾವಿಸಿದೆ !



ಅಲ್ಲಿ ಯಾವ ವ್ಯಾಪಾರೀ ಮನೋಭಾವದ ಪೂಜಾರಿಗಳೂ ಇರಲಿಲ್ಲ. ಯಾವುದೇ ಸಮಸ್ಯೆಗಳಿರಲಿಲ್ಲ. ಕೇವಲ ಭಗವಂತನ ಆರಾಧನೆ ! ನಾನು ಯಾವ ತೀರ್ಥಕ್ಷೇತ್ರದಲ್ಲೂ ಇಷ್ಟೊಂದು ಆನಂದಪಟ್ಟಿರಲಿಲ್ಲ.

ನನಗೆ ಯಾವುದೇ ದರ್ಶನವಾಗಲಿಲ್ಲ. ತುಂಬಾ ನಿರಾಶೆಯಾಯಿತು. ಸ್ವಾಮೀಜಿ ಇಷ್ಟಪಟ್ಟಿದ್ದರೆ ನನ್ನ ಮೇಲೆ ಕೃಪೆ ಮಾಡಬಹುದಿತ್ತು.

ನಿನಗೆ ಈಗ ಅರ್ಥವಾಗುವುದಿಲ್ಲ. ನೀನು ತೀರ್ಥಯಾತ್ರೆ ಮಾಡಿದ್ದೀಯಲ್ಲ. ಅದು ನಿನ್ನೊಳಗೆ ಕೆಲಸಮಾಡುತ್ತಿರುತ್ತದೆ. ಆಮೇಲೆ ನಿನಗೆ ಎಲ್ಲವೂ ಸ್ಪಷ್ಟವಾಗಿ ತಿಳಿಯುತ್ತದೆ.

ಕೊಲ್ಕತ್ತೆಗೆ ಮರಳಿದ ಮೇಲೆ ನಂ. 16, ಬೋಸ್‌ಪಾಡಾ ಲೇನ್‌ನಲ್ಲಿ ಮನೆ ಸಿಕ್ಕಿತು. ಈ ಮನೆ ಬಾಗ್‌ಬಜಾರ್‌ನಲ್ಲಿದ್ದ ಶ್ರೀಮತೆಯವರ ಮನೆಗೆ ಹತ್ತಿರದಲ್ಲಿತ್ತು.



ನೆರೆಹೊರೆಯವರು ಅವಳನ್ನು ತಮ್ಮಲ್ಲಿ ಒಬ್ಬಳೆಂಬಂತೆ ಸ್ವೀಕರಿಸಿದರು.



ಅವರು ಅವಳಿಗೆ ಆಗಾಗ ತಿಂಡಿಗಳನ್ನು ಕೊಡುತ್ತಿದ್ದರು. ಅವಳ ಅತಿಥಿಗಳನ್ನೂ ಸತ್ಕರಿಸುತ್ತಿದ್ದರು.



ಅವರು ಅವಳಲ್ಲಿಗೆ ಬಂದು ಸಾಂತ್ವನವನ್ನು ಪಡೆಯುತ್ತಿದ್ದರು. ಅವಳು ಎಲ್ಲರನ್ನೂ ನಗುನಗುತ್ತಾ ಸ್ವಾಗತಿಸುತ್ತಿದ್ದಳು. ತನಗೆ ಗೊತ್ತಿರುವ ಕೆಲವು ಬಂಗಾಳೀ ಪದಗಳನ್ನು ಬಳಸಿ ಮಾತನಾಡುತ್ತಿದ್ದಳು.



ಅವರಿಗೆ ಆವಶ್ಯಕತೆ ಇದ್ದಾಗಲೆಲ್ಲ ಅವಳು ಸಹಾಯ ಮಾಡಲು ಉತ್ಸುಕಳಾಗಿದ್ದಳು.

ಒಂದು ಸಾಯಂಕಾಲ ಹತ್ತಿರದ ಗುಡಿಸಲಿನಿಂದ ಜೋರಾಗಿ ಅಳುವ ಧ್ವನಿಯೊಂದನ್ನು ಕೇಳಿದಳು.

ಅವಳು ತಕ್ಷಣವೇ ಅಲ್ಲಿಗೆ ಹೋದಳು. ಮಗುವೊಂದು ಸಾಯುವ ಸ್ಥಿತಿಯಲ್ಲಿತ್ತು.



ಮಗು ಮರಣ ಹೊಂದಿದದ ನಂತರ ಅವಳು ಅಲ್ಲಿಯೇ ಇದ್ದು, ಮಗುವಿನ ತಾಯಿಯನ್ನು ಮುಟ್ಟಿ ಸಂತೈಸಿದಳು.



ಕಲ್ಕತ್ತೆಯಲ್ಲಿ ಪ್ಲೇಗ್ ಹರಡಿತು. ಓಣಿಗಳನ್ನು ಶುಚಿಗೊಳಿಸಲು ಯಾರೂ ಇಲ್ಲದ್ದನ್ನು ನೋಡಿ, ತಾನೇ ಒಂದು ಪೊರಕೆ ತೆಗೆದುಕೊಂಡು ಗುಡಿಸಲು ಪ್ರಾರಂಭಿಸಿದಳು.



ಅದನ್ನು ನೋಡಿ ಕೆಲವು ಯುವಕರು ಅವಳಿಗೆ ಸಹಾಯ ಮಾಡಲು ಮುಂದಾದರು.



ನವೆಂಬರ್ 13, 1898 ರ ಕಾಳೀಪೂಜೆಯ ಪವಿತ್ರದಿನದಂದು ತನ್ನ ಮನೆಯಲ್ಲಿಯೇ ಹೆಣ್ಣುಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದಳು.



ಶ್ರೀಮಾತೆಯವರೇ ಅಲ್ಲಿಗೆ ಬಂದು ಶಾಲೆಯ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಆಶೀರ್ವದಿಸಿದರು.

ಸ್ವಾಮಿ ವಿವೇಕಾನಂದರು ತಮ್ಮ ಸಹೋದರ ಸಂನ್ಯಾಸಿಗಳೊಡನೆ ಅದರಲ್ಲಿ ಪಾಲ್ಗೊಂಡರು.



ಕಾಳೀಮಾತೆಯ ಸಂಪೂರ್ಣ ಅನುಗ್ರಹ ಈ ಶಾಲೆಯ ಮೇಲಿರಲಿ ಎಂದು ಆಶೀರ್ವದಿಸುತ್ತೇನೆ. ಇಲ್ಲಿ ಶಿಕ್ಷಣ ಪಡೆದ ಮಕ್ಕಳು ಆದರ್ಶಪ್ರಾಯರಾಗಿರುತ್ತಾರೆ.

ಮೊದಲು ಕೆಲವು ಹುಡುಗಿಯರು ಸ್ವಾಮೀಜಿಯವರನ್ನು ಗೌರವಿಸುವ ಕುಟುಂಬಗಳಿಂದ ಬಂದರು.



ನಿವೇದಿತಾ ತನ್ನ ಒಳ್ಳೆಯ ನಡತೆ ಹಾಗೂ ಸ್ವಾರ್ಥರಹಿತ ವರ್ತನೆಯಿಂದ, ನೆರೆಹೊರೆಯ ಸಂಪ್ರದಾಯಬದ್ಧರಾದ ಮಹಿಳೆಯರ ಮನಸ್ಸನ್ನು ಗೆದ್ದಳು.

ಅವಳ ಕೆಲಸದವಳು ಹುಡುಗಿಯರನ್ನು ಶಾಲೆಗೆ ಕರೆತರುತ್ತಿದ್ದಳು. ನಿವೇದಿತಾ ಆ ಚಿಕ್ಕಮಕ್ಕಳಿಗೆ ಓದಲು ಬರೆಯಲು ಹೇಳಿಕೊಡುತ್ತಿದ್ದಳು. ಚಿತ್ರಕಲೆ, ಹೊಲಿಗೆ, ಮಣ್ಣಿನ ಬೊಂಬೆಗಳನ್ನು ಮಾಡುವುದನ್ನು ಕಲಿಸುತ್ತಿದ್ದಳು.

ಆ ಶಾಲೆಯು ಮಕ್ಕಳಿಗೆ ತುಂಬಾ ಇಷ್ಟವಾಯಿತು. ಅದನ್ನು ನೋಡಿ ನಿವೇದಿತಾ ಸಂತೋಷ ಪಟ್ಟಳು.

ಮುಂದಿನ ಸಂಚಿಕೆಗೆ..